**ಇ.ಸಿ.ಎ. 1/2019, ಆರ್.ಡಬ್ಲೂ-2 ಹೆಸರುಃ ಸುಮಿತ್ರಮ್ಮ**

**ದಿಃ07-01-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಎಲ್.ಕೆ.ಎಸ್. ವಕೀಲರಿಂದಃ**

ನಮ್ಮ ಗ್ರಾಮದ 1 ನೇ ಎದುರುದಾರರು ಮತ್ತು ನನ್ನ ನಡುವೆ ಯಾವುದೇ ವೈಮನಸ್ಸು ಇಲ್ಲ. ನಾನು ಮತ್ತು 1 ನೇ ಎದುರುದಾರರು ಅನ್ಯೂನ್ಯವಾಗಿ ಇದ್ದೇವೆ. ನಾಗರಾಜ ಬಿನ್ ನಂಜಪ್ಪ ನನಗೆ ಗೊತ್ತಿಲ್ಲ. ಮಂಜುನಾಥ ಬಿನ್ ಮುರುಗೇಂದ್ರಪ್ಪ ಗೊತ್ತು. ನಾನು ಮತ್ತು ಮಂಜುನಾಥ್ ಅನ್ಯೂನ್ಯವಾಗಿ ಇದ್ದೇವೆ. ನನ್ನ ಮತ್ತು ಈ ಪ್ರಕರಣದ ಅರ್ಜಿದಾರರಾದ ಸಂತೋಷ್‌ರವರ ನಡುವೆ ಯಾವುದೇ ವೈಮನಸ್ಸು ಇಲ್ಲ. ನನ್ನ ಮತ್ತು ಅರ್ಜಿದಾರರ ತಾಯಿಯ ನಡುವೆ ಯಾವುದೇ ವೈಮನಸ್ಸು ಇಲ್ಲ. ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ತಿಳಿದುಕೊಂಡಿದ್ದೇನೆ.

2. ಅರ್ಜಿದಾರರು ಸಲ್ಲಿಸಿರುವ ಅರ್ಜಿಯಲ್ಲಿನ ವಿಚಾರಗಳ ಕುರಿತು ಗೊತ್ತಿಲ್ಲ. 1 ನೇ ಎದುರುದಾರರು ಸಲ್ಲಿಸಿರುವ ತಕರಾರಿನ ಕುರಿತು ನನಗೆ ಗೊತ್ತಿಲ್ಲ. ನಾನು ಸಲ್ಲಿಸಿರುವ ತಕರಾರಿನ ವಿಚಾರಗಳ ಕುರಿತು ಕೂಡ ನನಗೆ ಗೊತ್ತಿಲ್ಲ. ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಸಂತೋಷ ಬೈಕಿನಿಂದ ಬಿದ್ದಿದ್ದಾನೆ ಎಂದು ಊರಿನ ಜನರು ಹೇಳುತ್ತಾರೆ. ಅರ್ಜಿದಾರರು ಬೈಕಿನಿಂದ ಬಿದ್ದಿದ್ದರು ಎಂಬ ಬಗ್ಗೆ ಮಾಹಿತಿ ಇದ್ದು, ಎಲ್ಲಿ ಬಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಯಾರ ಬೈಕಿನಿಂದ ಬಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಅರ್ಜಿದಾರರು ಬೈಕಿನಿಂದ ಬಿದ್ದಿದ್ದಾನೆ ಎಂಬ ಬಗ್ಗೆ ಮಾತ್ರ ನನಗೆ ಮಾಹಿತಿ ಇದ್ದು, ಇತರೆ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ. ಅರ್ಜಿದಾರರಿಗೆ ಗಾಯಗಳು ಏರ್ಪಡುವ ಪೂರ್ವದಲ್ಲಿ ಹಾಗೂ ನಂತರದಲ್ಲಿ ನಾನು 1 ನೇ ಎದುರುದಾರರೊಂದಿಗೆ ಅನ್ಯೂನ್ಯವಾಗಿ ಇದ್ದೆನು. ನಾನು ಮತ್ತು 1 ನೇ ಎದುರುದಾರರು ಸೇರಿಕೊಂಡು ಪೊಲೀಸ್ ಠಾಣೆಗೆ ಘಟನೆಯ ಕುರಿತು ಮಾಹಿತಿ ನೀಡಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಎದುರುದಾರರು ಷರೀಕಾಗಿ ಚರ್ಚೆ ಮಾಡಿ ತಕರಾರನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ.

3. ಕೆ.ಎ.16/ಟಿಎ-6357 ರ ಟ್ರಾಕ್ಟರ್ ನನ್ನ ಹೆಸರಿನಲ್ಲಿಯೇ ಇದೆ. ಟ್ರಾಕ್ಟರ್‌ನ್ನು ಖರೀದಿಸಿದಾಗ ನನಗೆ ನೊಂದಣಿ ಸಂಖ್ಯೆ ನೀಡಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ದಿ.26.06.2018 ರ ಘಟನೆಯ ಸಮಯದಲ್ಲಿ ನನ್ನ ಟ್ರಾಕ್ಟರ್‌ಗೆ ನೋಂದಣಿ ಸಂಖ್ಯೆ ಇರಲಿಲ್ಲ ಎಂದರೆ ಸಾಕ್ಷಿ ಯಾವುದೇ ಘಟನೆ ನಡೆದಿಲ್ಲ ಹಾಗೂ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಖರೀದಿಸಿರುವ ಟ್ರಾಕ್ಟರ್‌ಗೆ ಟ್ರೈಲರ್‌ನ್ನು ಹಾಕಲು ಹುಕ್ಕು ಇದೆ ಎಂದರೆ ಸರಿಯಲ್ಲ. ನಮ್ಮ ಟ್ರಾಕ್ಟರ್‌ಗೆ ಬೇರೆಯವರ ಟ್ರೈಲರ್‌ನ್ನು ಹಾಕಿ ಓಡಿಸಲು ಹುಕ್ಕು ಇದೆ ಎಂದರೆ ಸಾಕ್ಷಿ ನಾನು ಯಾವತ್ತೂ ಬೇರೆಯವರ ಟ್ರೈಲರ್‌ನ್ನು ಹಾಕಿಲ್ಲ ಎಂದು ಹೇಳುತ್ತಾರೆ. ನಾನು ವಿಶ್ವಾಸದ ಮೇರೆಗೆ ನನಗೆ ಸೇರಿದ ಟ್ರಾಕ್ಟರ್‌ನ್ನು ಬೇರೆಯವರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

4. ದಿ.26.06.2018 ರಂದು 1 ನೇ ಎದುರುದಾರರು ನನ್ನ ಅನುಮತಿಯ ಮೇರೆಗೆ ನನಗೆ ಸೇರಿದ ಟ್ರಾಕ್ಟರ್‌ನ್ನು ತೆಗೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಸದರಿ ದಿನದಂದು 1 ನೇ ಎದುರುದಾರರು ಟ್ರಾಕ್ಟರ್‌ನ್ನು ತೆಗೆದುಕೊಂಡು ಹೋಗುವ ಕಾಲಕ್ಕೆ ಟ್ರಾಕ್ಟರ್‌ನೊಂದಿಗೆ ಟ್ರೈಲರ್ ಸಹ ಇತ್ತು ಎಂದರೆ ಸರಿಯಲ್ಲ. 1 ನೇ ಎದುರುದಾರರು ನನಗೆ ಸೇರಿದ ಟ್ರಾಕ್ಟರ್‌ನ್ನು ಮತ್ತು ಅದರೊಂದಿಗೆ ಟ್ರೈಲರ್‌ನ್ನು ತೆಗೆದುಕೊಂಡು 1 ನೇ ಎದುರುದಾರರ ಜಮೀನಿನಲ್ಲಿ ತೆಂಗಿನ ಎಡೆಮಟ್ಟೆಯನ್ನು ತುಂಬಲು ಅರ್ಜಿದಾರರನ್ನು ಮತ್ತು ನಾಗರಾಜ್‌ರವರನ್ನು ಕೂಲಿಯಾಗಿ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಸದರಿ ದಿನದಂದು ಅರ್ಜಿದಾರರಾದ ಸಂತೋಷ್ ತೆಂಗಿನ ಎಡೆಮಟ್ಟೆಯನ್ನು ತುಂಬಿ ಹಗ್ಗವನ್ನು ಎಳೆಯುವಾಗ ಹಗ್ಗ ತುಂಡಾಗಿ ಕೆಳಗೆ ಬಿದ್ದು ಗಾಯಗೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಎದುರುದಾರರ ಸೂಚನೆಯ ಮೇರೆಗೆ ಅರ್ಜಿದಾರರು ಕೆಲಸ ಮಾಡುತ್ತಿದ್ದಾಗ ಬಿದ್ದು ಗಾಯಗೊಂಡಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರು ಗಾಯಗೊಂಡು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರು ನನಗೆ ಸೇರಿದ ಟ್ರಾಕ್ಟರ್‌ನ ಟ್ರೈಲರ್‌ನಲ್ಲಿ 1 ನೇ ಎದುರುದಾರರ ಬಳಿ ಕೆಲಸ ಮಾಡುತ್ತಿದ್ದಾಗ ಬಿದ್ದು ಗಾಯಗೊಂಡಿದ್ದು, ನಮ್ಮ ಮೇಲೆ ಹೊಣೆಗಾರಿಕೆ ಬರುತ್ತದೆ ಎಂದು ನಾನು ಮತ್ತು 1 ನೇ ಎದುರುದಾರರು ಸೇರಿಕೊಂಡು ಮಂಜುನಾಥ್ ರವರ ಮೂಲಕ 1 ನೇ ಎದುರುದಾರರಿಗೆ ಸೇರಿದ ಬೈಕು ಡಿಕ್ಕಿಪಡಿಸಿ ಅಪಘಾತ ಪಡಿಸಿರುತ್ತದೆ ಎಂದು ಸುಳ್ಳು ದೂರನ್ನು ಕೊಡಿಸಿ, ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಗಾಯಾಳುವಾದ ಸಂತೋಷ್‌ರವರ ಹೇಳಿಕೆಯನ್ನು ಪಡೆದುಕೊಂಡ ನಂತರ ಪೊಲೀಸರು ನನಗೆ ಟ್ರಾಕ್ಟರ್‌ನ್ನು ಅಮಾನತ್ತುಪಡಿಸಿಕೊಳ್ಳುವ ಬಗ್ಗೆ ನೋಟೀಸನ್ನು ಕೊಡಲು ನಮ್ಮ ಮನೆಯ ಬಳಿ ಬಂದಿದ್ದರು ಎಂದರೆ ಸರಿಯಲ್ಲ. ಪೊಲೀಸರು ನೋಟೀಸನ್ನು ನೀಡುವ ಪೂರ್ವದಲ್ಲಿಯೇ ಸಂತೋಷ್‌ರವರು ಟ್ರೈಲರ್‌ನಿಂದ ಬಿದ್ದಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸಂತೋಷ್‌ರವರು ಗಾಯಗೊಂಡು ಪ್ರಜ್ಞೆ ತಪ್ಪಿದ್ದು, ಆತನನ್ನು ನಾನು, 1 ನೇ ಎದುರುದಾರರು ಮತ್ತು ಮಂಜುನಾಥ್‌ರವರೆ ಆಸ್ಪತ್ರೆಗೆ ಸಾಗಿಸಿದ್ದೇವೆ ಎಂದರೆ ಸರಿಯಲ್ಲ. ನಾವೆಲ್ಲರೂ ಸೇರಿಕೊಂಡು ಆಸ್ಪತ್ರೆಯಲ್ಲಿ ಬೈಕು ಡಿಕ್ಕಿಪಡಿಸಿದೆ ಎಂದು ಬರೆಸಿದ್ದೆವು ಎಂದರೆ ಸರಿಯಲ್ಲ. ಪೊಲೀಸರು ನನಗೆ ಟ್ರಾಕ್ಟರ್‌ನ್ನು ಹಾಜರುಪಡಿಸಲು ನೋಟೀಸನ್ನು ನೀಡಿದ್ದಾಗ್ಯೂ ಕಾನೂನನ್ನು ಪಾಲನೆ ಮಾಡದೆ ಟ್ರಾಕ್ಟರ್‌ನ್ನು ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ. ಸಂತೋಷ್‌ರವರು ಟ್ರೈಲರ್‌ನಿಂದ ಬಿದ್ದಿರುವುದಾಗಿ ಸುಳ್ಳು ಹೇಳಿಕೆಯನ್ನು ನೀಡಿ ಈ ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ನಾನು ಸಂತೋಷನ ವಿರುದ್ಧ ಯಾವುದೇ ಕಾನೂನಿನ ಕ್ರಮವನ್ನು ತೆಗೆದುಕೊಂಡಿಲ್ಲ.

6. ನನ್ನ ಮಗ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಗಣಕೀಕೃತ ಬೆರಳಚ್ಚುಗಾರರಾಗಿ ಕೆಲಸ ಮಾಡುತ್ತಿದ್ದಾರೆ. ಈ ಪ್ರಕರಣದ ಕುರಿತು ನನಗಿಂತ ನನ್ನ ಮಗನಿಗೆ ಹೆಚ್ಚು ಮಾಹಿತಿ ಇದೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯ ವಿರುದ್ಧ ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರ, ಹೊಳಲ್ಕೆರೆಗೆ ಮನವಿಯನ್ನು ನೀಡಿದ್ದು, ಜಿಲ್ಲಾ ಅಧೀಕ್ಷಕರು, ಚಿತ್ರದುರ್ಗ ರವರಿಗೆ ಯಾವುದೇ ದೂರನ್ನು ನೀಡಿಲ್ಲ. ನಾನು ಕಾನೂನು ಸೇವಾ ಪ್ರಾಧಿಕಾರ, ಹೊಳಲ್ಕೆರೆಗೆ ನೀಡಿದ್ದ ಮನವಿಯ ಕುರಿತು ತನಿಖಾಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಂಡಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ. ಘಟನೆಗೆ ಕಾರಣವಾದ ಟ್ರಾಕ್ಟರ್ ನನ್ನ ಹೆಸರಿನಲ್ಲಿ ನೋಂದಣಿಯಾಗಿದ್ದ ಕಾರಣ ಮತ್ತು ಟ್ರಾಕ್ಟರ್‌ನ್ನು ನಮ್ಮ ಮನೆಯ ಬಳಿ ನಿಲ್ಲಿಸಿಕೊಂಡಿದ್ದ ಕಾರಣ ಪೊಲೀಸರು ನೋಟೀಸನ್ನು ನೀಡಿದರೂ ನಾನು ಟ್ರಾಕ್ಟರ್‌ನ್ನು ಹಾಜರುಪಡಿಸದ ಕಾರಣ ಪೊಲೀಸರು ಅಮಾನತ್ತು ಪಂಚನಾಮೆಯ ಮೂಲಕ ಟ್ರಾಕ್ಟರ್‌ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಸೇರಿದ ಟ್ರಾಕ್ಟರ್‌ನ್ನು ಮತ್ತು ಅದರೊಂದಿಗೆ ಟ್ರೈಲರ್‌ನ್ನು 1 ನೇ ಎದುರುದಾರರು ತೆಗೆದುಕೊಂಡು ಹೋಗಿ ಅರ್ಜಿದಾರರ ಬಳಿ ತೆಂಗಿನ ಮಟ್ಟೆ ತುಂಬಿಸುವ ಸಮಯದಲ್ಲಿ ಅರ್ಜಿದಾರರು ಬಿದ್ದು ಗಾಯಗೊಂಡಿದ್ದಾರೆ ಎಂದು ತನಿಖೆಯ ಸಮಯದಲ್ಲಿ ಕಂಡುಬಂದ ಕಾರಣ ತನಿಖಾಧಿಕಾರಿಗಳು ನನ್ನ ಮತ್ತು 1 ನೇ ಎದುರುದಾರರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

7. ತನಿಖಾಧಿಕಾರಿಗಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ ನಂತರ ನನಗೆ ಮತ್ತು 1 ನೇ ಎದುರುದಾರರಿಗೆ ನ್ಯಾಯಾಲಯದಿಂದ ಸಮನ್ಸ್ ಬಂದಿತ್ತು ಎಂದರೆ ಸರಿಯಲ್ಲ. ಸದರಿ ದೋಷಾರೋಪಣ ಪಟ್ಟಿಯನ್ನು ರದ್ದುಪಡಿಸುವ ಕುರಿತು ನಾನು ಯಾವುದೇ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿಲ್ಲ. ಗಾಯಾಳುವಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ